# ವಾರ್ತಾ ವಿಶ್ಲೇಷಣೆ

## ಈ ಶತಮಾನದಲ್ಲಿ ಮೇಲುಗೈ ಯಾರದು?

ಇಂದಿನ ಜಾಗತಿಕ ಪರಿಸರದಲ್ಲಿ ಪಾಶ್ಚಿಮಾತ್ಯ ದೇಶಗಳು, ವಿಶೇಷವಾಗಿ ಅಮೆರಿಕ, ಇಡೀ ಜಗತ್ತನ್ನು ಆಳುತ್ತಿದೆ ಎಂದು ಒಂದು ದೃಷ್ಟಿಯಲ್ಲಿ ಹೇಳಬಹುದು. ಆದರೆ ಇದು ಹೆಚ್ಚು ಕಾಲ ಮುಂದುವರಿಯುವುದಿಲ್ಲವೆಂದು ಅನೇಕ ಚಿಂತಕರು ಅಭಿಪ್ರಾಯ ಪಡುತ್ತಾರೆ. ಅಮೆರಿಕದಲ್ಲಿಯೇ ಏಶಿಯನ್ನರ ಪ್ರಭಾವ ಹೆಚ್ಚುತ್ತಿದೆ. ಅಮೆರಿಕ ಸಿಲಿಕನ್ ವ್ಯಾಲಿಯಲ್ಲಿ ಮಾಹಿತಿ ತಂತ್ರಜ್ಞಾನವು ಹೆಚ್ಚಾಗಿ ಚೈನೀಯರು, ಕೊರಿಯನರು, ಜಪಾನಿಗಳು ಮತ್ತು ಭಾರತೀಯರನ್ನು ಅವಲಂಬಿಸಿದೆ. ಅಮೆರಿಕದಲ್ಲಿ ಇಷ್ಟೊಂದು ಮಹತ್ಸಾಧನೆಯನ್ನು ಮಾಡಿದ ಅವರು ತಮ್ಮ ತಮ್ಮ ದೇಶಗಳಲ್ಲಿ ಏಕೆ ಮಾಡಬಾರದು ಎಂದು ಕೇಳುತ್ತಾರೆ ಇಯಾನ್ ಬುರುಮ (ರೀಡರ್ಸ್ ಡೈಜೆಸ್ಟ್, ಸೆಪ್ಟೆಂಬರ್ ೨೦೦೦).

ಮುಂದಿನ ಪ್ರಗತಿ ಮಾಹಿತಿ ತಂತ್ರಜ್ಞಾನವನ್ನೇ ಮುಖ್ಯವಾಗಿ ಆಧರಿಸಿರುವಂತಹುದು. ಮಾಹಿತಿ ತಂತ್ರಜ್ಞಾನದಲ್ಲಿ ಮುಂದುವರಿಯಬೇಕಾದರೆ ವ್ಯಕ್ತಿಸ್ವಾತಂತ್ರ್ಯ ಅತ್ಯಂತ ಆವಶ್ಯಕ ಎಂದು ಇಯಾನ್ ಬುರುಮ ಅಭಿಪ್ರಾಯ ಪಡುತ್ತಾರೆ. ಚೈನಾದಲ್ಲಿ ಇನ್ನೂ ಸರ್ವಾಧಿಕಾರ ಸರ್ಕಾರವೇ ನಡೆಯುತ್ತಿದೆ, ಮತ್ತು ಇತ್ತೀಚಿನ ವರದಿಯ ಪ್ರಕಾರ ಅಲ್ಲಿ ಭ್ರಷ್ಟಾಚಾರ ಅತಿಯಾಗುತ್ತಿದೆ. ಅಲ್ಲಿ ಅತಿ ಶೀಘ್ರವಾಗಿ ಇಂಟರ್ನೆಟ್ ಬಳಕೆ ಜಾಸ್ತಿಯಾಗುತ್ತಿದ್ದರೂ ಸರ್ಕಾರ ಅದರ ಮೇಲೆ ಸರ್ಪಗಾವಲನ್ನು ಇಟ್ಟಿದೆ—ಹೊರ ಜಗತ್ತಿನ ಸಂಪರ್ಕ ಅಧಿಕವಾಗದಂತೆ ಎಚ್ಚರಿಕೆ ವಹಿಸುತ್ತಿದೆ. ಜಪಾನ್ ಕೂಡ ಈ ಶತಮಾನದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುವ ಸಾಧ್ಯತೆ ಕಡಿಮೆ ಎಂಬುದು ಇಯಾನ್ ಬುರುಮರ ಅಭಿಪ್ರಾಯ.

ಭಾರತ ಆಶ್ಚರ್ಯಕರ ಪ್ರಗತಿಯನ್ನು ಸಾಧಿಸಬಹುದೆಂದು ಅವರು ಹೇಳುತ್ತಾರೆ. ಭಾರತೀಯ ಸರ್ಕಾರವು ಭಾರತೀಯ ಯುವಕರಿಗೆ ಅವಶ್ಯಕವಾದ ಸ್ವಾತಂತ್ರ್ಯವನ್ನು ನೀಡುವುದಾದರೆ ಭಾರತವು ಬಹುಬೇಗನೆ ಚೀನಾವನ್ನು ಮೀರಿ ಹೋಗುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಈಗ ಅಮೆರಿಕದಲ್ಲಿ ವಾಸಿಸುತ್ತಿರುವ ಪೋಲೆಂಡಿನ ವಿದ್ವಾಂಸರೊಬ್ಬರು ಹೇಳುತ್ತಾರೆ: 'ನಾನು ತುಂಬ ಉತ್ಸುಕತೆಯಿಂದ ಮೂರನೆ ಸಹಸ್ರಮಾನದ ಆಗಮನವನ್ನು ನಿರೀಕ್ಷಿಸುತ್ತೇನೆ. ಅದು ಈಗಿರುವ ಸ್ಥಿತಿಗಿಂತ ಉತ್ತಮವಾಗಿರುತ್ತದೆ ಎಂದು ನನ್ನ ನಂಬಿಕೆ. ಅದು ಉತ್ತಮವಾಗುವುದು ಪಶ್ಚಿಮದ ಜ್ಞಾನಸಂಪತ್ತಿನಿಂದಲ್ಲ, ಪೂರ್ವದಿಂದ ಇದು ಆಗಬೇಕು ಎಂಬುದು ನನ್ನ ದೃಢ ನಂಬಿಕೆ. ಮೂರನೇ ಸಹಸ್ರಮಾನವನ್ನು ರೂಪಿಸುವಲ್ಲಿ ಭಾರತವು ಪ್ರಧಾನ ಪಾತ್ರ ವಹಿಸುತ್ತದೆ.'

ಹೀಗೆ ಎಷ್ಟೋ ಆರ್ಥಿಕ ವಿದ್ವಾಂಸರು, ಇತಿಹಾಸಜ್ಞರು ಹೇಳುವುದನ್ನು ನಾವು ಕೇಳುತ್ತೇವೆ. ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದರು ಮುಂತಾದ ಆಧ್ಯಾತ್ಮಿಕ ಮಹಾಪುರುಷರೂ ಭಾರತಕ್ಕೆ ಭವ್ಯ ಭವಿಷ್ಯವಿದೆಯೆಂದು ಮನಗಂಡರು. ಆದರೆ ಭಾರತದ ಈಗಿನ ದುಃಸ್ಥಿತಿಯನ್ನು ನೋಡಿದರೆ ಇವನ್ನೆಲ್ಲ ನಂಬುವುದೇ ಕಷ್ಟವಾಗುತ್ತದೆ. ಭವ್ಯ ಭವಿಷ್ಯದ ಕಲ್ಪನೆ ವ್ಯಕ್ತಿಯನ್ನು ಉನ್ನತ ಮಟ್ಟಕ್ಕೆ ಏರಿಸುವಂತೆ ಇಡೀ ದೇಶವನ್ನೂ ಉನ್ನತಿಗೇರಿಸಬಹುದೇನೊ. ಭಾರತದ ಜನರು, ವಿಶೇಷವಾಗಿ ಯುವಕರು ಈ ಆಶಾವಾದದಿಂದ ಕೂಡಿದ್ದರೆ ಭವ್ಯ ಭವಿಷ್ಯದ ನಿರ್ಮಾಣ ಸಾಧ್ಯವಾಗಬಹುದೇನೊ. ❐

## ಟಿ.ವಿ. ಉನ್ಮತ್ತರಿಗೆ ಕಿವಿಮಾತು

'ನಾವು ಟಿ.ವಿ. ನೋಡುವುದನ್ನು ನಿಲ್ಲಿಸಿ ನಮ್ಮ ನಿಜವಾದ ಜೀವನಕ್ಕೆ ನಾವು ಹಿಂದಿರುಗಿದೆವು' ಎನ್ನುತ್ತಾರೆ ಕ್ಯಾಥರಿನ್ ಗಿಬ್ಬನ್. ಮಗುವೇ ಮನೆಯನ್ನಾಳುವ ರಾಜ ಎಂದು ಮಕ್ಕಳ ಬಗ್ಗೆ ಹೇಳುವುದುಂಟು. ಈಗ ಟಿ.ವಿ. ಪ್ರತಿಯೊಂದು ಮನೆಯನ್ನೂ ಆಳುತ್ತಿದೆ ಎನ್ನಬಹುದು. 'ಈಡಿಯಟ್ ಬಾಕ್ಸ್' ಎಂದು ನಾವು ಅದನ್ನು ನಿಂದಿಸಿದರೂ ಮನೆಯಲ್ಲಿ ಪ್ರತಿಯೊಂದು ಆಗುಹೋಗುಗಳೂ ಅದರ ಕಾರ್ಯಕ್ರಮಗಳಿಗೆ ಅಧೀನವಾಗಿ ನಡೆಯುತ್ತದೆ. ಊಟಮಾಡುವುದು, ನಿದ್ದೆ ಮಾಡುವುದು, ಓದುವುದು [ಓದುವ ಅಭ್ಯಾಸವೇ ಈಗ ಬಹು ಮಟ್ಟಿಗೆ ಕಡಮೆಯಾಗಿದೆ], ಅತಿಥಿಗಳನ್ನು ನೋಡಿಕೊಳ್ಳುವುದು ಅಥವಾ ನೋಡಿಕೊಳ್ಳದೇ ಇರುವುದು, ಮಕ್ಕಳನ್ನು ಲಾಲಿಸಿ ಪಾಲಿಸುವುದು, ಅಡಿಗೆ ಮಾಡುವುದು ಮುಂತಾದ ಗೃಹಕೃತ್ಯಗಳೆಲ್ಲವನ್ನೂ ಈಡಿಯಟ್ ಬಾಕ್ಸ್ ನಿಯಂತ್ರಿಸುತ್ತದೆ.

'ಪ್ರತಿದಿನ ಎರಡು ಗಂಟೆಗಳಿಗಿಂತ ಜಾಸ್ತಿ ನಾವು ಟಿ.ವಿ.ಯನ್ನು ನೋಡುತ್ತಿರಲಿಲ್ಲವಾದರೂ ನಾವು ಉಣ್ಣುವುದು, ಮಾತನಾಡುವುದು, ಆಲೋಚಿಸುವುದು ಇವುಗಳೆಲ್ಲದರ ಮೇಲೆ ಟಿ.ವಿ. ತನ್ನ ಪ್ರಭಾವವನ್ನು ಬೀರಿರುವುದಾಗಿ ಅನಿಸುತ್ತಿತ್ತು', ಎನ್ನುತ್ತಾರೆ ಕ್ಯಾಥರಿನ್. ಕುಟುಂಬದಲ್ಲಿ ಪರಸ್ಪರ ಸಂಪರ್ಕಕ್ಕಾಗಲಿ, ಮಾಡಬೇಕಾದ ಕೆಲಸಗಳಿಗಾಗಲೀ ಸಾಕಷ್ಟು ಸಮಯವೇ ಸಿಗುತ್ತಿರಲಿಲ್ಲ. ಓದಬೇಕಾದ ಪುಸ್ತಕಗಳ ರಾಶಿ ಬೆಳೆಯುತ್ತಿತ್ತು. ಕೊನೆಗೆ ದೃಢ ನಿಶ್ಚಯದಿಂದ ಟಿ.ವಿ. ನೋಡುವುದನ್ನೇ ಆಕೆ ಸಂಪೂರ್ಣ ನಿಲ್ಲಿಸಿಬಿಟ್ಟರು.

ಇದರಿಂದಾಗಿ ಮನೆಯಲ್ಲಿ ಹೆಚ್ಚು ನೆಮ್ಮದಿಯುಂಟಾಯಿತು. ಮನೆಯವರೆಲ್ಲ ಸೇರಿ ಹೂವು ತರಕಾರಿ ಮುಂತಾದುವುಗಳನ್ನು ಬೆಳೆಸಿದರು. ತೋಟ ಉತ್ತಮಗೊಂಡಿತು. ಟಿ.ವಿ. ಸುದ್ದಿಯ ಬದಲು ದೈನಿಕ, ಸಾಪ್ತಾಹಿಕ, ಮಾಸಿಕಗಳನ್ನು ಓದತೊಡಗಿದರು. ಗ್ರಂಥಾಧ್ಯಯನಕ್ಕೆ ಸಾಕಷ್ಟು ಸಮಯ ಸಿಕ್ಕತೊಡಗಿತು. ಬೇರೆ ಬೇರೆ ಕೆಲಸಗಳ ಮೂಲಕ ಹೆಚ್ಚು ಹಣ ಸಂಪಾದನೆಗೂ ಸಮಯ ಸಿಕ್ಕಿತು. ಪ್ರವಾಸಕ್ಕೆ